# FEBRUARY 10, 2025
# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಏರೋ ಇಂಡಿಯಾ ವೈಮಾನಿಕ ಪ್ರದರ್ಶನ; ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ, ಇಂದು ಚಾಲನೆ.
- 'ಪರೀಕ್ಷಾ ಪೇ ಚರ್ಚಾ'; ಹೊಸ ದಿಲ್ಲಿಯ ಭಾರತ ಮಂಟಪಂನಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಆರಂಭ.
- 'ಪಾತರಗಿತ್ತಿ ಹಾಗೂ ಜೇನು ದುಂಬಿಗಳ ಹಬ್ಬ'; 8ನೇ ಜನ ಜಾಗೃತಿ ಸಪ್ತಾಹ, ಯಶಸ್ವಿ ಸಂಪನ್ನ.
- ಇಂದು, ರಾಷ್ಟ್ರೀಯ ಜಂತು ಹುಳು, ನಿವಾರಣಾ ದಿನಾಚರಣೆ.
- ಇಂದು, ವಿಶ್ವ ಬೇಳೆ ಕಾಳುಗಳ, ಬಳಕೆ ಜಾಗ್ರತಿ ದಿನ.

<><><>

ಈಗ ವಾರ್ತೆಗಳ ವಿವರ

<><><>

ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ, ಇಂದು ಬೆಳಗ್ಗೆ 9.30ಕ್ಕೆ ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್, ವೈಮಾನಿಕ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. 14ರ ವರೆಗೆ ಏರ್ ಶೋ ನಡೆಯಲಿದೆ. ಸ್ವದೇಶಿ ಹಾಗೂ ವಿದೇಶಿ ನಿರ್ಮಿತ ಲೋಹದ ಹಕ್ಕಿಗಳು ಸಾಹಸ ಪ್ರದರ್ಶಿಸಲಿವೆ. 13 ಮತ್ತು 14 ನೇ ತಾರೀಖು, ವೈಮಾನಿಕ ಪ್ರದರ್ಶನವನ್ನು, ಸಾರ್ವಜನಿಕರು ವೀಕ್ಷಿಸಬಹುದು.

<><><>

'ಏರೋ ಇಂಡಿಯಾ ಶೋ 2025' ಹಿನ್ನೆಲೆ, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ, ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್, ದೇಶೀಯ ರಕ್ಷಣಾ ಉತ್ಪಾದನೆ, ದಾಖಲೆಯ 1 ದಶಾಂಶ 2–7 ಲಕ್ಷ ಕೋಟಿ ರೂಪಾಯಿ ಮೀರಿದೆ ಎಂದರು. ವೈಮಾನಿಕ ಪ್ರದರ್ಶನದ ಫಲಶೃತಿಯಿಂದ, ರಕ್ಷಣಾ ಪರಿಕರಗಳ ಉತ್ಪಾದನೆಯಲ್ಲಿ, ಭಾರತ ಸ್ವಾವಲಂಬನೆಯತ್ತ ಸಾಗಲು ಸಹಕಾರಿಯಾಗಲಿದೆ ಎಂದು, ಅವರು ತಿಳಿಸಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 11 ಗಂಟೆಗೆ, ಹೊಸ ದಿಲ್ಲಿಯ ಭಾರತ ಮಂಟಪಂನಲ್ಲಿ, 8ನೇ ಆವೃತ್ತಿಯ 'ಪರೀಕ್ಷಾ ಪೇ ಚರ್ಚಾ'ದಲ್ಲಿ, ವಿದ್ಯಾರ್ಥಿಗಳು, ಪೋ ಕರು ಮತ್ತು ಶಿಕ್ಷಕರೊಂದಿಗೆ, ಪರೀಕ್ಷಾ ಸಿದ್ಧತೆ ಹಾಗೂ ಒತ್ತಡ ನಿರ್ವಹಣೆ ಕುರಿತು, ಸಂವಾದ ನಡೆಸಲಿದ್ದಾರೆ. ಈ ಬಾರಿಯ ಪರೀಕ್ಷಾ ಪೇ ಚರ್ಚಾ ಹೊಸ ವಿನ್ಯಾಸದೊಂದಿಗೆ 8 ಸಂಚಿಕೆಗಳಲ್ಲಿ ಮೂಡಿ ಬರುತ್ತಿದೆ. ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಿಂದ, 36 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

<><><>

ಕಾವೇರಿ, ಕಪಿಲಾ ಹಾಗೂ ಸ್ಫಟಿಕ ನದಿಗಳ ಪವಿತ್ರ ತ್ರಿವೇಣಿ ಸಂಗಮ, ತಿ. ನರಸಿಪುರದ ತಿರುಮ ಕೂಡಲಿನಲ್ಲಿ, ಆರು ವ ್ಷಗಳ ಬಳಿಕ, ಇಂದು ಕುಂಭಮೇಳ ನಡೆಯಲಿದೆ. ಇಂದಿನಿಂದ ಮೂರು ದಿನಗಳ ಕಾಲ ನಡೆಯುವ, ಪುಣ್ಯ ಸ್ನಾನಕ್ಕೆ, ಲಕ್ಷಾಂತರ ಜನ ಆಗಮಿಸುವ ನಿರೀಕ್ಷೆ ಇದೆ. ಮೈಸೂರು ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಂಡಿದೆ.

<><><>

'ಪಾತರಗಿತ್ತಿ ಹಾಗೂ ಜೇನು ದುಂಬಿಗಳ ಹಬ್ಬ'ದ ಹಿನ್ನೆಲೆ, ರಾಜ್ಯ ಅರಣ್ಯ ಇಲಾಖೆಯ, ವನ್ಯಜೀವಿ ಸಂರಕ್ಷಣಾ ವಿಭಾಗ, ಬೆಂಗಳೂರಿನ ಅರಕೆರೆಯ, ದೊರೆಸಾನಿ ಪಾಳ್ಯದಲ್ಲಿ, ಚಿಟ್ಟೆಗಳ ವೀಕ್ಷಣೆ, ಸಮೀಕ್ಷೆ ಹಾಗೂ ಜನ ಜಾಗೃತಿ 8ನೇ ಸಪ್ತಾಹವನ್ನು ಯಶಸ್ವಿಯಾಗಿ ಆಯೋಜಿಸಿತು.

<><><>

ಬೆಂಗಳೂರು ವಲಯದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಚ್.ಸೀಮಾ ಆಕಾಶವಾಣಿಗೆ ಮಾಹಿತಿ ನೀಡಿ, ಚಿಟ್ಟೆಗಳು ಹಾಗೂ ಜೇನು ದುಂಬಿಗಳ ಕುರಿತು, ಯುವಜನರು ಹಾಗೂ ಶ್ರೀ ಸಾಮಾನ್ಯರಲ್ಲಿ ಆಸಕ್ತಿ ಅರಳಿಸಲು, ಈ ಸಪ್ತಾಹ ಜರುಗಿತು; ಮನೆ ಅಂಗಳದಲ್ಲಿ ಅವುಗಳಿಗೆ ಆಹಾರ ಮತ್ತು ಆಸರೆ ಒದಗಿಸುವ, ಗಿಡಗಳನ್ನು ನೆಟ್ಟು, ಆಮಂತ್ರಿಸುವ ಬಗ್ಗೆ ಮಾಹಿತಿ ನೀಡಲಾಯಿತು ಎಂದರು.

<><><>

ಈ ಕುರಿತು ಒಂದು ವರದಿ..

<><><>

*ವರಕವಿ ದ.ರಾ. ಬೇಂದ್ರೆ ಅವರ, 'ಪಾತರಗಿತ್ತಿ ಪಕ್ಕ.. ನೋಡಿದೇನ ಅಕ್ಕ..' ಕವನ ನೆನಪಿಸುವ ಪ್ರಯತ್ನವನ್ನು, ಪ್ರಾಯೋಗಿಕವಾಗಿ ಅರಣ್ಯ ಇಲಾಖೆ, ಒಂದು ವಾರ ಕೈಗೊಂಡು, ಗಮನ ಸೆಳೆದಿದೆ.*

*ಚಿಟ್ಟೆಗಳು ಹಾಗೂ ಜೇನು ದುಂಬಿಗಳು, ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ನಡೆಸುವ, ಪರಾಗಸ್ಪರ್ಷ ಮತ್ತು ಪರಾಗರೇಣು ಹರಡುವ ಕ್ರಿಯೆ, ಪ್ರಕೃತಿಯಲ್ಲಿ ಹೂವು, ಹಣ್ಣುಗಳ ಬಣ್ಣ, ರುಚಿ ಮತ್ತು ಗಾತ್ರ ನಿರ್ಧರಿಸುತ್ತದೆ ಎಂಬ ಕುತೂಹಲಕಾರಿ ಮಾಹಿತಿಯೇ, ಬೆರಗು ಮೂಡಿಸುವಂಥದ್ದು!*

*ನಿಸರ್ಗದ ಸಮತೋಲನದಲ್ಲಿ ಪಾತರಗಿತ್ತಿ ಹಾಗೂ ಜೇನುದುಂಬಿಗಳ ಪಾತ್ರವನ್ನು ತಿಳಿಸುವ ಉದ್ದೇಶದಿಂದ, ಪ್ರಕೃತಿ ನಡಿಗೆ, ನಿಸರ್ಗದ ಸೂಕ್ಷ್ಮ ಕೊಂಡಿಗಳ ಬಗ್ಗೆ ತಜ್ಞರಿಂದ ಮಾರ್ಗದರ್ಶನ, ಅವುಗಳ ಜೀವನ ಚಕ್ರ ಮತ್ತು ನಮ್ಮ ಬದುಕಿನಲ್ಲಿ ಅವು ನಿರ್ವಹಿಸುವ ಮಹತ್ವದ ಪಾತ್ರದ ಬಗ್ಗೆ ಶಿಬಿರ ಮನವರಿಕೆ ಮಾಡುವಲ್ಲಿ ಯಶಸ್ವಿಯಾಯಿತು.*

*ಶಾಲಾ ವಿದ್ಯಾರ್ಥಿಗಳಿಗೆ ಚಿತ್ರ ರಚನೆ, ರಸ ಪ್ರಶ್ನೆ, ಛಾಯಾಚಿತ್ರ ಸ್ಪರ್ಧೆ ಹಾಗೂ ಪ್ರದರ್ಶಿನಿ ಮನಸೂರೆಗೊಂಡಿತು.*

*'ಬಟರ್ ಫ್ಲೈ ಆರ್ ಬೀ' ಮುಕ್ತ ಛಾಯಾಚಿತ್ರ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ, ಹವ್ಯಾಸಿ ಛಾಯಾಗ್ರಾಹಕ, ಧಾರವಾಡದ ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯದಲ್ಲಿ ಕೃಷಿ ಅಧಿಕಾರಿಯಾಗಿರುವ, ಪೃಥ್ವಿ ಟಿ.ಪಿ.ಎಂ. ತಮ್ಮ ಚಿಟ್ಟೆ ಛಾಯಾಚಿತ್ರಕ್ಕೆ ಪ್ರಶಸ್ತಿ ಪಡೆದಿದ್ದಾರೆ.*

*ಪ್ರದೇಶ ಸಮಾಚಾರಕ್ಕಾಗಿ ಪೃಥ್ವಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ..*

<><><>

ವಿವೇಕ ಧ್ವನಿ 50 ಸೆಕೆಂದುಗಳು + ಪೃಥ್ವಿ ಟಿ.ಪಿ.ಎಂ. ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಇಂದು, ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನಾಚರಣೆ. 1 ರಿಂದ 19 ವರ್ಷದೊಳಗಿನ ಮಕ್ಕಳಿಗೆ, ಜಂತು ನಿವಾರಕ ಅಲ್ಬೆಂಡರ್ಝೋಲ್ ಮಾತ್ರೆಗಳನ್ನು ನೀಡಿ, ಸಾಮಾನ್ಯವಾಗಿ ಮಕ್ಕಳನ್ನು ಬಾಧಿಸುವ ಅಶಕ್ತತೆ, ಅಪೌಷ್ಟಿಕತೆ ಹಾಗೂ ದೈಹಿಕ ಮತ್ತು ಮಾನಸಿಕ ಅಸ್ವಸ್ಥತೆಯನ್ನು ಸರಿಪಡಿಸಿ, ಆರೋಗ್ಯ ವರ್ಧನೆಗಾಗಿ, ಈ ದಿನವನ್ನು ಮೀಸಲಿಡಲಾಗಿದೆ. 'ಸಮಗ್ರ ಆರೋಗ್ಯ ವರ್ಧನೆ, ಪೌಷ್ಟಿಕತೆ ಗುಣಮಟ್ಟ ಸುಧಾರಣೆ ಹಾಗೂ ಸರ್ವರಿಗೂ ಶಿಕ್ಷಣ ಒದಗಿಸುವ ಧ್ಯೇಯ'ದೊಂದಿಗೆ, ಮಣ್ಣಿನಿಂದ ಹಬ್ಬುವ ಹೆಲ್ಮಿಂಥ್ಸ್ ಹಾಗೂ ಪರಾವಲಂಬಿ ಹೊಟ್ಟೆ ಹುಳು, ಜಂತು ನಿವಾರಿಸಲು, ಸಂಕಲ್ಪಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಇಂದು, ಶಾಲೆ ಹಾಗೂ ಮಹಾವಿದ್ಯಾಲಯಗಳಲ್ಲಿ, ಜಂತು ಹುಳು ನಿವಾರಣೆ ಮಾತ್ರೆ ಒದಗಿಸಲು, ಯೋಜಿಸಿದೆ. ಆನೆಕಾಲು ರೋಗ ತಡೆಗೂ ಇಂದು, ಮಾತ್ರೆ ವಿತರಿಸಲಾಗುತ್ತಿದೆ.

<><><>

ಇಂದು, ವಿಶ್ವ ಬೇಳೆ ಕಾಳುಗಳ, ಬಳಕೆ ಜಾಗ್ರತಿ ದಿನ. ಬೇಳೆ ಕಾಳುಗಳಲ್ಲಿರುವ ಪೌಷ್ಟಿಕಾಂಶ ಹಾಗೂ ಪಾರಿಸಾರಿಕ ಲಾಭಗಳ ಕುರಿತು, ಶ್ರೀಸಾಮಾನ್ಯರಲ್ಲಿ ಜಾಗ್ರತಿ ಮೂಡಿಸುವ ದಿನವಾಗಿ, ಆಚರಿಸಲ್ಪಡುತ್ತಿದೆ. ಬೇಳೆ ಕಾಳುಗಳು ಹೆಚ್ಚಿನ ಪೌಷ್ಟಿಕಾಂಶ, ಕಡಿಮೆ ಕೊಬ್ಬು ಹಾಗೂ ಸುಲಭವಾಗಿ ಜೀರ್ಣಿಸಬಹುದಾದ ನಾರಿನಾಂಶ ಹೊಂದಿವೆ. ದೈನಂದಿನ ಆಹಾರದಲ್ಲಿ ಬೇಳೆ ಕಾಳುಗಳನ್ನು ಹೆಚ್ಚು ಬಳಸಿದಲ್ಲಿ, ಆರೋಗ್ಯ ವರ್ಧನೆಗೆ ಸಹಕಾರಿ ಎಂದು, ಜನರಲ್ಲಿ ತಿಳಿವಳಿಕೆ ಮೂಡಿಸಲು, ಈ ದಿನ ಮೀಸಲಿದೆ.

<><><>

ರಾಜ್ಯ ಲಲಿತಕಲಾ ಅಕಾದೆಮಿ, ಗೌರವ ಪ್ರಶಸ್ತಿಗೆ ಭಾಜನರಾದ ನಾಡಿನ ಒಟ್ಟು ಆರು ಜನ ಪ್ರತಿಭಾವಂತ ಕಲಾವಿದರಲ್ಲಿ, ಕಮಲ್ ಅಹಮದ್ ಕೂಡ ಒಬ್ಬರು. ಮೂಲತಃ ಗದಗ ಜಿಲ್ಲೆಯವರಾದ, ಕುಂಚ ಕಲಾವಿದ ಕಮಲ್ ಅಹಮದ್, ಪ್ರಸ್ತುತ ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ಶಿವಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಚಿತ್ರಕಲಾ ಶಿಲ್ಪಿ ಡಿ.ವಿ.

ಹಾಲಭಾವಿ ರಾಷ್ಟ್ರೀಯ ಕುಂಚ ಕಲಾಶ್ರೀ ಪ್ರಶಸ್ತಿಗೂ ಭಾಜನರಾಗಿರುವ ಕಮಲ್, ಭಾರತೀಯ ಸಾಂಪ್ರದಾಯಿಕ ಕಿರುಚಿತ್ರ ಕಲೆ ಹಾಗೂ ಪೌರಾಣಿಕ ಕಥಾ ವಸ್ತುಗಳನ್ನು ಆಧರಿಸಿ, ಚಿತ್ರ ರಚನೆಯಲ್ಲಿ ತೊಡಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಖುಷಿ ವ್ಯಕ್ತಪಡಿಸಿದ್ದಾರೆ.

<><><>

ಕಮಲ್ ಅಹಮದ್ ಧ್ವನಿ 40 ಸೆಕೆಂದುಗಳು

<><><>

ಚಿಕ್ಕಮಗಳೂರು ಜಿಲ್ಲೆ, ಕಳಸ ತಾಲೂಕಿನ, ಆನೆ ಗುಡ್ಡ ಅರಣ್ಯ ವ್ಯಾಪ್ತಿಯಲ್ಲಿ, ಕಾಡ್ಗಿಚ್ಚು ಹಬ್ಬಿದ್ದು, ಬೆಂಕಿ ಆವರಿಸಿದೆ. ಸಾಕಷ್ಟು ಪ್ರಮಾಣದ ಸಸ್ಯ ಸಂಕುಲ ಬೆಂಕಿಯಿಂದ ನಾಶವಾಗಿದೆ. ಅತೀ ಎತ್ತರದ ಪ್ರದೇಶದಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿ, ಡ್ರೋಣ್ ಕ್ಯಾಮೆರಾ ಮೂಲಕ, ಪರಿಸ್ಥಿತಿ ಮೇಲೆ ನಿಗಾವಹಿಸಿದ್ದಾರೆ. ಬೆಂಕಿಯನ್ನು ಹತೋಟಿಗೆ ತರಲು ಪ್ರಯತ್ನಿಸುತ್ತಿದ್ದಾರೆ.

<><><>

ಭಾರತೀಯ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇ ನ್, ಬಳ್ಳಾರಿಯಲ್ಲಿ ನಾಲ್ಕು ದಿನಗಳ ಕಾಲ ಆಯೋಜಿಸಿದ್ದ, 70ನೇ ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್, ಪುರು ಹಾಗೂ ಮಹಿಳೆಯರ ಲೀಗ್ ಕಂ ನಾಕೌಟ್ ಅಂತಿಮ ಪಂದ್ಯಾವಳಿಯಲ್ಲಿ, ಮೂಡಬಿದಿರೆಯ ಆಳ್ವಾಸ್ ಮಹಿಳಾ ತಂಡ ಪ್ರಥಮ, ಕರ್ನಾಟಕ ಪುರು ರ ತಂಡ, ತೃತೀಯ ಸ್ಥಾನ ಪಡೆದವು. ದೇಶದ 30 ರಾಜ್ಯಗಳಿಂದ ತಂಡಗಳು ಪಾಲ್ಗೊಂಡಿದ್ದವು. ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇ ನ್ ಕಾರ್ಯದರ್ಶಿ ಪೃಥ್ವಿರಾಜು ಪ್ರಶಸ್ತಿ ಪ್ರದಾನ ಮಾಡಿದರು.

<><><>

ಮಣಿಪಾಲದ ಮಾಹೆ ವಿಶ್ವವಿದ್ಯಾಲಯ ಆಯೋಜಿಸಿದ್ದ, 7ನೇ ಆವೃತ್ತಿಯ ಮ್ಯಾರಥಾನ್‌ಗೆ, ಉಡುಪಿ ಜಿಲ್ಲಾಧಿಕಾರಿ ವಿದ್ಯಾಕುಮಾರಿ ಹಾಗೂ ಶಾಸಕ ಯಶ್‌ಪಾಲ್ ಸುವರ್ಣ ಚಾಲನೆ ನೀಡಿದರು. ಭಾರತ ಸೇರಿದಂತೆ, ಅನೇಕ ದೇಶಗಳ ಕ್ರೀಡಾಪಟುಗಳು ಮ್ಯಾರಥಾನ್‌ನಲ್ಲಿ ಭಾಗಿಯಾಗಿದ್ದರು. 42 ಕಿಲೋ ಮೀಟರ್, 21 ಕಿಲೋ ಮೀಟರ್, 5 ಹಾಗೂ 3 ಕಿಲೋ ಮೀಟರ್ ಮ್ಯಾರಥಾನ್‌ನಲ್ಲಿ ಸಹಸ್ರಾರು ಓಟಗಾರರು, ಕ್ರೀಡಾಪಟುಗಳು, ವಿಶೇ ಚೇತನರು ಪಾಲ್ಗೊಂಡಿದ್ದರು.

<><><>

ಉತ್ತರಾಖಂಡ ರಾಜ್ಯದ, ಡೆಹರಾಡೂನ್‌ನ ಹಲ್ದ್ವಾನಿಯಲ್ಲಿ ಆಯೋಜಿತ, 38 ನೇ ರಾಷ್ಟ್ರೀಯ ಕ್ರೀಡಾಕೂಟದ 13ನೇ ದಿನ, ಪದಕ ಪಟ್ಟಿಯಲ್ಲಿ, ಸರ್ವಿಸಸ್ 42 ಚಿನ್ನದ ಪದಕಗಳೊಂದಿಗೆ, ಅಗ್ರಸ್ಥಾನ ಕಾಯ್ದುಕೊಂಡಿದೆ. 30 ಚಿನ್ನದ ಪದಕಗಳೊಂದಿಗೆ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ 25 ಚಿನ್ನದ ಪದಕ ಗಳಿಸಿ, ಮೂರನೇ ಸ್ಥಾನದಲ್ಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಾಯಕ ಶರಣರಾದ ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಹಾಗೂ ಉರಿಲಿಂಗಪೆದ್ದಿ ಅವರ ಜಯಂತ್ಯುತ್ಸವ, ಇಂದು ಬೆಳಗ್ಗೆ 11.30ಕ್ಕೆ, ನಾಡಿನಾದ್ಯಂತ ಜರುಗಲಿದೆ.

<><><>

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ, ಮೂರು ದಿನಗಳ ಅಂತಾರಾಷ್ಟ್ರೀಯ ವಲಸೆ ಹಕ್ಕಿಗಳ ಜನ ಜಾಗ್ರತಿ ಉತ್ಸವ ಆಯೋಜಿತವಾಗಿದೆ.

<><><>

ಗದಗ ಜಿಲ್ಲೆ, ಗಜೇಂದ್ರಗಡ ತಾಲೂಕು, ಬೊಮ್ಮಸಾಗರದ ಶ್ರೀ ದುರ್ಗಾದೇವಿ ಜಾತ್ರೆ, ಇಂದಿನಿಂದ 13ರ ವರೆಗೆ ಮಧ್ಯರಾತ್ರಿ ನಡೆಯಲಿದೆ. ಪ್ರಾಣಿ ಬಲಿ ನಿಷೇಧಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದ್ದಾರೆ.

<><><>

ಧಾರವಾಡದ ಮದಿಹಾಳದಲ್ಲಿರುವ, ಶ್ರೀ ಸಿದ್ಧಾರೂಢ ಮಠದ ಪ್ರಥಮ ವಾರ್ಷಿಕೋತ್ಸವ ಮತ್ತು ಜಾತ್ರೆ ಇಂದು ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಏರೋ ಇಂಡಿಯಾ ವೈಮಾನಿಕ ಪ್ರದರ್ಶನ; ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ, ಇಂದು ಚಾಲನೆ.
- 'ಪರೀಕ್ಷಾ ಪೇ ಚರ್ಚಾ'; ಹೊಸ ದಿಲ್ಲಿಯ ಭಾರತ ಮಂಟಪಂನಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಆರಂಭ.
- 'ಪಾತರಗಿತ್ತಿ ಹಾಗೂ ಜೇನು ದುಂಬಿಗಳ ಹಬ್ಬ'; 8ನೇ ಜನ ಜಾಗೃತಿ ಸಪ್ತಾಹ, ಯಶಸ್ವಿ ಸಂಪನ್ನ.
- ಇಂದು, ರಾಷ್ಟ್ರೀಯ ಜಂತು ಹುಳು, ನಿವಾರಣಾ ದಿನಾಚರಣೆ.
- ಇಂದು, ವಿಶ್ವ ಬೇಳೆ ಕಾಳುಗಳ, ಬಳಕೆ ಜಾಗ್ರತಿ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>